**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 04-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 867/2015

CW-1 PW-4

ಸಾಕ್ಷಿದಾರರ ಹೆಸರು - ಶ್ರೀ ಅನಿಲಕುಮಾರ ಎಚ್ ಡಿ

ವಯಸ್ಸು - 40 ವರ್ಷ

ಉದ್ಯೋಗ - ಪೋಲಿಸ ಇನ್ಸಪೆಕ್ಟರ್

ಸಾಕೀನ - ಬೆಂಗಳೂರು

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ (ವಿ ಸಿ ಮುಖಾಂತರ)**

1) ನಾನು ದಿಃ 25-10-2014 ರಿಂದ 05-05-2015 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 24-12-2014 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮದ್ಯಾಹ್ನ 3-00 ಗಂಟೆಗೆ ಗೋಕಾಕ ಶಹರದ ಸಂಗೋಳ್ಳಿ ರಾಯಣ್ಣಾ ವೃತ್ತದ ಹತ್ತಿರ ಇರುವ ಲಕ್ಷ್ಮೀ ಲಾಡ್ಜನಲ್ಲಿ ಮಾಲೀಕ ಸಂಜಯ ಮಲ್ಲಪ್ಪಾ ಗೌಡರ ವೇಶ್ಯಾವಾಟಿಕೆ ನಡೆಸುತ್ತಿದ್ದಾರೆ ಎಂಬ ಮಾಹಿತಿಯ ಮೇರೆಗೆ ಸದರಿ ಮಾಹಿತಿಯನ್ನು ಠಾಣಾ ಡಾಯರಿಯಲ್ಲಿ ನಮೂದಿಸಿ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ, ದಾಳಿ ಮಾಡಲು ಡಿ ಎಸ್ ಪಿ ಗೋಕಾಕ ರವರಿಂದ ಅನುಮತಿ ಪಡೆದು, ದಾಳಿಗಾಗಿ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಚಾಸಾ 4 ರಿಂದ 9 ರವರನ್ನು ಕರೆದುಕೊಂಡು, ಎಲ್ಲರಿಗೂ ಮಾಹಿತಿಯನ್ನು ತಿಳಿಸಿ, ಠಾಣಾವಾಹನದಲ್ಲಿ ಠಾಣೆಯಿಂ ದ 4-00 ಗಂಟೆಗೆ ಹೊರಟು, ಸದರಿ

ಲಾಡ್ಜಗೆ ಹೋಗಿ ಚಾಸಾ 2 ರಿಂದ 9 ರವರ ಸಮಕ್ಷಮ ದಾಳಿ ಮಾಡಿದಾಗ ಮೊದಲನೇ ಮಹಡಿಯ ಕೌಂಟರನಲ್ಲಿ ಇದ್ದ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ಸಂಜಯ ಮಲ್ಲಪ್ಪಾ ಗೌಡರ ಎಂದು ತಿಳಿಸಿದ್ದು, ನಂತರ 1 ನೇ ಮಹಡಿಯ ಎಲ್ಲ ಕೋಣೆಗಳನ್ನು ಪರಿಶೀಲಿಸಲಾಗಿ, ಎಲ್ಲಾ ಕೋಣೆಗಳು ಖಾಲಿ ಇದ್ದು, ನಂತರ 2 ನೇ ಮಹಡಿಗೆ ಹೋಗಿ ಪರಿಶೀಲಿಸಲಾಗಿ, ರೂಮ ನಂಬರ 13 ರಲ್ಲಿ ಒಬ್ಬ ಗಂಡಸು ಹಾಗೂ ಒಬ್ಬ ಹೆಂಗಸು ಇದ್ದು ಅವರು ಅರೆ ನಗ್ನಾವಸ್ಥೆಯಲ್ಲಿದ್ದು, ಅವರನ್ನು ವಿಚಾರಿಸಲಾಗಿ ಅವರು ಮಲ್ಲಿಕಾರ್ಜುನ ರಾಮಪ್ಪಾ ದಾನಪ್ಪಗೋಳ, ಸಾಃ ನಾಗನೂರ ಎಂದು ತಿಳಿಸಿದ್ದು, ಸದರಿ ಹೆಂಗಳು ತಾನು ಭಾಗ್ಯಶ್ರೀ ಅವ್ವಣ್ಣಾ ಕಾಳಣ್ಣವರ ಸಾಃ ನಾಗನೂರ ಎಂದು ತಿಳಿಸಿದ್ದು, ಸದರಿಯವಳು ಮಲ್ಲಿಕಾರ್ಜುನ ರಾಮಪ್ಪಾ ದಾನಪ್ಪಗೋಳ ಈತನು ಹಣ ಕೊಡುತ್ತೇನೆ ವೇಶ್ಯಾವಾಟಿಕೆಯಲ್ಲಿ ತೊಡಗುವಂತೆ ಹೇಳಿ ಕರೆದುಕೊಂಡು ಬಂದಿರತ್ತಾನೆ ಎಂದು ತಿಳಿಸಿದ್ದು, ನಂತರ ಮಲ್ಲಿಕಾರ್ಜುನ ರಾಮಪ್ಪಾ ದಾನಪ್ಪಗೋಳ ರವರನ್ನು ಪರಿಶೀಲಿಸಲಾಗಿ ಅವರ ಹತ್ತಿರ ಇದ್ದ ಒಂದು ಸ್ಯಾಮಸಂಗ ಕಂಪನಿಯ ಮೋಬೈಲ, ರೂ. 500/-ನಗದು ಸಿಕ್ಕಿದ್ದು ನಂತರ 1 ನೇ ಆರೋಪಿಯನ್ನು ವಿಚಾರಿಸಲಾಗಿ, ಅವರು ಲಾಡ್ಜನಲ್ಲಿ ವೇಶ್ಯಾವಾಟಿಕೆ ನಡೆಸುವ ಬಗ್ಗೆ ಒಪ್ಪಿ ಕೊಂಡಿದ್ದು, ನಂತರ ಅವರಿಂದ ಸದರಿ ಲಾಡ್ಜನ ರಜಿಸ್ಟರ ಅನ್ನು ವಶಕ್ಕೆ ಪಡೆದು, ನಂತರ ಲಾಡ್ಜನ ಉಳಿದ ಮಹಡಿಗಳನ್ನು ಪರಿಶೀಲಿಸಲಾಗಿ ಯಾರು ಸಿಕ್ಕಿರುವುದಿಲ್ಲ. ಪರಿಶೀಲನೆಯ ನಂತರ ಸ್ಥಳದಲ್ಲಿ ದಾಳಿ ಪಂಚನಾಮೆಯನ್ನು 4-35 ರಿಂದ 5-35 ರ ವರೆಗೆ ಜರುಗಿಸಿ ಪಂಚರ ಸಹಿ ಪಡೆದು, ಸದರಿ ಲಾಡ್ಜನ ಮಾಲೀಕ ಹಾಗೂ ಮಲ್ಲಿಕಾರ್ಜುನ ರಾಮಪ್ಪಾ ದಾನಪ್ಪಗೋಳ ರವರನ್ನು ಠಾಣೆಗೆ ಕರೆದುಕೊಂಡು ಬಂದು ಪಂಚನಾಮೆ ಹಾಗೂ ಆರೋಪಿ ಸಮೇತ ದೂರನ್ನು ದಾಖಲಿಸಿರುತ್ತೇನೆ.

3)   ಸಾಕ್ಷಿ ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ (ವಿ ಸಿ ಮುಖಾಂತರ)**

1)   ಘಟನಾ ಸ್ಥಳ ಠಾಣೆಯಿಂದ 400 ಮೀ. ದೂರದಲ್ಲಿರುತ್ತದೆ. ಚಾಸಾ 2 ಮತ್ತು 3 ರವರನ್ನು ಚಾಸಾ 10 ರವರು ಕರೆದುಕೊಂಡು ಬಂದಿದ್ದರು. ನಾನು ದಾಳಿ ಕೈಗೊಂಡು 1 ಮತ್ತು 2 ನೇ ಆರೋಪಿಗಳು ಹಾಗೂ ನನ್ನ ಜೊತೆ ಬಂದಿದ್ದ ನನ್ನ ಸಿಬ್ಬಂದಿಗಳನ್ನು ಹಾಗೂ ಪಂಚರನ್ನು ಮರಳಿ ಠಾಣೆಗೆ ಕರೆದುಕೊಂಡು ಬಂದಿರುತ್ತೇನೆ. ನಾವು ಮರಳಿ ಬರುವಾಗ ಯಾರು ಯಾರು ಯಾವ ಯಾವ ವಾಹನಗಳಲ್ಲಿ ಎಷ್ಟು ಜನ ಬಂದಿರುತ್ತೇವೆ ನೆನಪಿಲ್ಲ. ನಾನು ದಾಳಿ ಮಾಡಲು ನನಗೆ ಮಾಹಿತಿ ಬಂದ ತಕ್ಷಣವೇ ಅನುಮತಿ ಪಡೆದಿರುತ್ತೇನೆ. ಅನಮತಿ ಪಡೆಯಲು ನಿವೇದನೆಯನ್ನು ನನ್ನ ಸಿಬ್ಬಂದಿ ಸಲ್ಲಿಸಿ ಬಂದಿದ್ದು ಅವರ ಹೆಸರು ನನಗೆ ನೆನಪಿಲ್ಲ. ಪೋಲಿಸ ಠಾಣೆಯಿಂದ ವೃತ್ತ ನಿರೀಕ್ಷಕರ ಕಚೇರಿ ಸುಮಾರು 2 ಕಿ. ಮೀ. ದೂರ ಇರುತ್ತದೆ. ನಾನು ನಿವೇದನೆ ಸಲ್ಲಿಸಿ ಅನುಮತಿ ಪಡೆಯಲು ಸುಮಾರು ಅರ್ಧ ಗಂಟೆ ಸಮಯ ಬೇಕಾಗುತ್ತದೆ ಎಂದರೆ ಸರಿಯಲ್ಲ, ಕೇವಲ 20 ರಿಂದ 25 ನಿಮಿಷ ಮಾತ್ರ ಬೇಕಾಗುತ್ತದೆ. ಅದೇ ರೀತಿ ಪಂಚರಿಗೆ ಹಾಗೂ ಸಿಬ್ಬಂದಿಗಳಿಗೆ ವಿಷಯ ತಿಳಿಸಲು 20 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿ, ನಿವೇದನೆ ಸಲ್ಲಿಸಿ ಅನುಮತಿ ಪಡೆದು ವಿಷಯ ತಿಳಿಸಲು ಒಟ್ಟಿಗೆ 20 ರಿಂದ 25 ನಿಮಿಷ ಸಾಕಾಗುತ್ತದೆ ಎಂದು ನುಡಿಯುತ್ತಾರೆ.

2)   ಸಾಮಾನ್ಯವಾಗಿ ನಮ್ಮ ಠಾಣೆಯಿಂದ ಸಿ ಪಿ ಆಯ ಕಚೇರಿಗೆ ಹೋಗಿ ಅನುಮತಿ ಪಡೆಯಲು ಟ್ರಾಫಿಕ ಇರುವ ಕಾರಣ ಸದರಿ ಕಚೇರಿಗೆ ತಲುಪಲು ಹೆಚ್ಚಿನ ಸಮಯ

ಬೇಕಾಗುತ್ತದೆ ಎಂದರೆ ಸಾಕ್ಷಿ, ಪ್ರಸ್ತುತ ಪ್ರಕರಣದ ಅನುಮತಿ ಪಡೆಯುವ ಸಮಯದಲ್ಲಿ ಟ್ರಾಫಿಕ ಇರದ ಕಾರಣ ಅಷ್ಟೊಂದು ಸಮಯ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಲಾಡ್ಜನ ನೆಲಮಾಳಿಗೆಯಲ್ಲಿ ಯಾವ ಯಾವ ಅಂಗಡಿಗಳು ಇದ್ದವು ಎಂದು ನನಗೆ ನೆನಪಿಲ್ಲ. ಅದೇ ರೀತಿ ಮೊದಲನೇ ಮಹಡಿಯಲ್ಲಿ ಎಷ್ಟು ಕೋಣೆಗಳು ಇದ್ದವು ಎಂದು ನನಗೆ ನೆನಪಿಲ್ಲ. ಆರೋಪಿ ಯಾವುದೇೀ ತಪ್ಪು ಮಾಡಿರುವುದಿಲ್ಲ, ಆರೋಪಿಯ ಲಾಡ್ಜ ನಮ್ಮ ಠಾಣೆಯ ಹತ್ತಿರ ಇದ್ದ ಕಾರಣ, ನಾವು ಅವಶ್ಯಕತೆ ಇದ್ದಾಗ ಅವರ ಲಾಡ್ಜನ ಕೋಣೆಗಳನ್ನು ಪುಕ್ಕಟ್ಟೆಯಾಗಿ ಕೇಳಿದಾರ ಅವರು ನಿರಾಕರಿಸಿದ್ದರಿಂದ ಅವರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ಖೊಟ್ಟಿಯಾಗಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಿಬ್ಬಂದಿ ನಿಪಿ-1 ನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ತಯಾರಿಸಿ ಸಾಕ್ಷಿಗಳ ಸಹಿ ಪಡೆದು ಕಡತಕ್ಕೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿ ಲ್ಲದಿದ್ದರೂ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.